**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ.51/2015</u>**

**ದಿನಾಂಕಃ 09.01.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಸಿ ಬಿ ಈಶ್ವರಪ್ಪ | ಚಾಸಾ-10, ಪ್ರಾ.ಸ.-8 |
| ತಂದೆಯ ಹೆಸರು | ಃ | ಬಸಪ್ಪ | |
| ವಯಸ್ಸು | ಃ | 52 ವರ್ಷ | |
| ಉದ್ಯೋಗ | ಃ | ವ್ಯವಸಾಯ | |
| ವಾಸ | ಃ | ಚಿಕ್ಕಬಾಸೂರು | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಆರೋಪಿತರು ಪರಿಚಯ ಇರುತ್ತಾರೆ. ಪೋಲಿಸರು ನನಗೆ ಮತ್ತು ಚಾಸಾ-11 ರವರಿಗೆ ಮಹಜರ್ ಗೆ ಬರುವಂತೆ ತಿಳಿಸಿದ್ದರು. 12 ವರ್ಷದ ಹಿಂದೆ ಪೋಲಿಸರು ಬೆಂಗಳೂರಿನ ಬ್ಯಾಂಕಿನಲ್ಲಿ ಚಾಸಾ-4 ರವರ ಸಮಕ್ಷಮ ಮಹಜರ್ ಮಾಡಿ 11 ದಾಖಲೆಗಳನ್ನು ವಶಪಡಿಸಿಕೊಂಡಿರುತ್ತಾರೆ. ಅವು ಯಾವ ದಾಖಲೆಗಳು ಎಂದು ತಿಳಿದಿರುವುದಿಲ್ಲ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು, ಸಾಕ್ಷಿ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ದಿಃ 10.12.2012 ರಂದು ಪೋಲಿಸರು ಮಹಜರನ್ನು 4.30 ರಿಂದ 5.15 ರವರೆಗೆ ಮಾಡಿದರು ಎಂದರೆ ಸರಿ. ಆ ಸಮಯದಲ್ಲಿ ಪೋಲಿಸರಿಗೆ ಮ್ಯಾನೇಜಿಂಗ್ ಡೈರೆಕ್ಟರ್ ಆದ ನಾಗರಾಜ್ ರವರು ದಾಖಲೆಗಳನ್ನು ಹಾಜರುಪಡಿಸಿದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಮೂಲ ಕಡತಗಳನ್ನು ಅದಿನ ನಾಗರಾಜ್ ರವರು ಪೋಲಿಸರಿಗೆ ಹಸ್ತಾಂತರಿಸಿದರು ಎಂದರೆ ಸಾಕ್ಷಿಯು ನನಗೆ ದಾಖಲೆಗಳನ್ನು ತೋರಿಸಲಿಲ್ಲ ಆದರೆ ಕವರ್ ನಲ್ಲಿ ದಾಖಲೆಗಳನ್ನು ನೀಡಿದರು ಹಾಗೂ ನಾನು ಖುದ್ದಾಗಿ ದಾಖಲೆಗಳನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ( ಈ ದಿನ ಮಾನ್ಯ ಸರ್ಕಾರಿ ವಕೀಲರು

ಹಾಜರುಪಡಿಸಿದ ಮುಚ್ಚಿದ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸದರಿ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಯಿತು )

**<u>ಪಾಟೀಸವಾಲುಃ ಶ್ರೀ ಬಿ ಆರ್ ಆರೋಪಿ ಪರ ವಕೀಲರಿಂದಃ</u>**

ನನಗೆ ಪೋಲಿಸರು ಮಹಜರ್ ಮಾಡುವ ಮುನ್ನಾ ಯಾವುದೇ ನೋಟಿಸು ನೀಡಿರಲಿಲ್ಲ. ಚಾಸಾ-4 ಮತ್ತು ಪೋಲಿಸರು ನನ್ನನ್ನು ರೈಲಿನಲ್ಲಿ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. ನಾವು ಕಾರ್ಪೋರೇಷನ್ ಬ್ಯಾಂಕಿಗೆ ಹೋಗಿರುತ್ತೇವೆ. ಯಾವ ಉದ್ದೇಶಕ್ಕಾಗಿ ಬ್ಯಾಂಕಿಗೆ ಹೋದೆವು ಎಂದು ತಿಳಿದಿರುವುದಿಲ್ಲ. ಬ್ಯಾಂಕಿನಲ್ಲಿ 4.30 ರಿಂದ 5.00 ಗಂಟೆವರೆಗೆ ಇದ್ದೆವು. ನಾನು ಬ್ಯಾಂಕಿನಲ್ಲಿ ಎಷ್ಟು ಸಹಿ ಮಾಡಿದೆ ಎಂದು ನೆನಪಿಲ್ಲ. ನಿಪಿ-20 ನ್ನು ಬ್ಯಾಂಕಿನವರು ಬರವಣಿಗೆ ಮಾಡಿರುತ್ತಾರೆ ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಬ್ಯಾಂಕಿನವರ ಬರವಣಿಗೆ ಬಿಟ್ಟು ಬೇರೆ ದಾಖಲೆಗಳಿಗೆ ಸಹಿ ಮಾಡಿರುವುದಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-20 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.